India Foundation for the Arts — Over 20 Years of Celebrating the Arts — IFA

ಕಲಿ-ಕಲಿಸು — AN ARTS EDUCATION TEACHER INITIATIVE — KALI-KALISU

## ಕಲಿ ಕಲಿಸು: ಕಿರುಚಿತ್ರ

ಕಲಿ ಕಲಿಸು ಯೋಜನೆಯ ವಿಸ್ತಾರವನ್ನು ಪರಿಚಯಿಸಲು ಕಲಿ ಕಲಿಸು ಎಂಬ ಕಿರುಚಿತ್ರವನ್ನು ತಯಾರಿಸಲಾಗಿತ್ತು. ಕರ್ನಾಟಕದ ಸರ್ಕಾರಿ ಶಾಲೆಗಳಲ್ಲಿ ಐ ಎಫ್ ಎ ವತಿಯಿಂದ ನಡೆದ ಕಲಿ ಕಲಿಸು ಯೋಜನೆಯ ಮಹತ್ವದ ಪರಿಣಾಮಗಳನ್ನು ಈ ಕಿರುಚಿತ್ರ ಒಳಗೊಂಡಿದೆ. ಶಿಕ್ಷಕರು, ಕಲಾವಿದರು ಶಾಲಾ ಪರಿಸರ ಒಳಗೊಂಡಂತೆ ಕಲೆಯನ್ನು ಶಿಕ್ಷಣದ ಭಾಗವಾಗಿ ಮನಗಂಡು ಕಾರ್ಯನಿರ್ವಹಿಸಿದಾಗ ಮಕ್ಕಳ ಪ್ರತಿಕ್ರಿಯೆಗಳನ್ನು ಚಿತ್ರ ಪರಿಣಾಮಕಾರಿಯಾಗಿ ಸೆರೆಹಿಡಿದಿದೆ. ಶಿಕ್ಷಕರು ಕಲಾ ಶಿಕ್ಷಣದ ಮಹತ್ವವನ್ನು ಅರಿತು ಅದನ್ನು ಮಕ್ಕಳ ಸರ್ವಾಂಗೀಣ ಪ್ರಗತಿಗೆ ಒಂದು ತಂತ್ರವಾಗಿ ಪರಿಗಣಿಸಿ ತರಗತಿಯನ್ನು ಗೋಡೆಗಳ ಆಚೆ ಒಯ್ಯುವ ಪ್ರಕ್ರಿಯೆಗಳು ಈ ಚಿತ್ರದಲ್ಲಿ ದಾಖಲಾಗಿದೆ.

ಸ್ಥಳೀಯ ಕಲಾ ಪ್ರಕಾರಗಳನ್ನು ಅದ್ಭುತವಾಗಿ ಸ್ಥಳೀಯ ಕಲಾವಿದರೊಂದಿಗೆ ಸಮುದಾಯದೊಂದಿಗೆ ಬಳಸುತ್ತಾ ಮಕ್ಕಳು ತಮ್ಮ ಅನುಭವಗಳನ್ನು ವೈಯಕ್ತಿಕ ನೆಲೆಯಲ್ಲಿ ಹಂಚಿಕೊಳ್ಳುವ ದೃಶ್ಯಗಳು ಈ ಚಿತ್ರದಲ್ಲಿವೆ ಜಾತಿ ಮತ್ತು ಬಾಲ್ಯ ವಿವಾಹಗಳ ಗೋಡೆಗಳನ್ನು ಮಕ್ಕಳು ಹೇಗೆ ಎದುರಿಸುತ್ತಾರೆ? ಅವರು ಹೇಗೆ ವಿಮರ್ಶಿಸಲು ಕಲಿಯುತ್ತಾರೆ? ಕರ್ನಾಟಕದ ಗ್ರಾಮೀಣ ಭಾಗದ ಶಾಲೆಗಳಲ್ಲಿ ಶಿಕ್ಷಕರು ಮತ್ತು ಕಲಾವಿದರು ವಿದ್ಯಾರ್ಥಿಗಳಿಗೆ ಹೇಗೆ ಆಸರೆ ಯಾಗುತ್ತಾರೆ? ಇಂತಹ ಹಲವು ಪ್ರಶ್ನೆಗಳಿಗೆ ಉತ್ತರ ನೀಡುತ್ತವೆ. ಅಷ್ಟೇ ಅಲ್ಲದೆ ಕಲಿ ಕಲಿಸು ಶಿಕ್ಷಕರ ಮೂಲಕ ಕಲಾವಿದರ ಮೂಲಕ ಹೇಗೆ ಕಲೆಯನ್ನು ಪರಿಣಾಮಕಾರಿಯಾಗಿ ಮಕ್ಕಳ ಕಲಿಕೆಗೆ ಅನುವು ಮಾಡಿಕೊಟ್ಟಿದೆ ಎಂಬುದನ್ನು ನಾವು ಕಾಣಬಹುದು.